ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 06-08-1970.

*ದೃಷ್ಟಿಯಿಂದ ಸೃಷ್ಟಿಯ ರಚನೆ* (दृष्टि से सृष्टि की रचना)

ಎಲ್ಲರೂ ಅವ್ಯಕ್ತ ಸ್ಥಿತಿಯಲ್ಲಿರುತ್ತಾ ವ್ಯಕ್ತದಲ್ಲಿ ಕಾರ್ಯವನ್ನು ಮಾಡುತ್ತಿರುವಿರಾ? ತಂದೆ ಹೇಗೆ ಅವ್ಯಕ್ತರಾಗಿದ್ದರೋ ವ್ಯಕ್ತದಲ್ಲಿ ಪ್ರವೇಶ ಮಾಡಿ ಕಾರ್ಯ ಮಾಡುತ್ತಾರೋ ಹಾಗೆಯೇ ತಂದೆಯ ಸಮಾನರಾಗಿರುವಿರಾ? ತಂದೆಯ ಸಮಾನರಾದಾಗ ಬೇರೆಯವರನ್ನೂ ತಂದೆಯ ಸಮಾನ ಮಾಡಬಹುದು, ತಂದೆಯ ಸಮಾನವಾದ ದೃಷ್ಟಿ ಇಗಿದೆಯೆ? ಎಂದು ತಮ್ಮನ್ನು ತಾವೇ ಕೇಳಿಕೊಳ್ಳಿ, ವಾಣಿ ಮತ್ತು ಸಂಕಲ್ಪ ತಂದೆಯ ಸಮಾನವಾಗಿವೆಯೇ? ತಂದೆಗೆ ಏನು ಸ್ಮೃತಿಯಲ್ಲಿರುತ್ತದೆ ಗೊತ್ತಿದೆಯೇ? ತಂದೆಯ ಸ್ಮೃತಿಯಲ್ಲಿ ಏನಿರುತ್ತದೆ ಮತ್ತು ತಮ್ಮ ಸ್ಮೃತಿಯಲ್ಲಿ ಸದಾ ಏನಿರುತ್ತದೆ, ಏನು ಅಂತರವಿದೆ? ಸಮಾನ ಸ್ಮೃತಿಯಿರುತ್ತದೆಯೇ? ಏನಾದರೂ ಸ್ಮತಿಯಿರುತ್ತದೆಯೋ ಅಥವಾ ಏನೂ ಇರುವುದಿಲ್ಲವೋ? ಸ್ಮೃತಿಯಿರುತ್ತದೆಯೋ ಅಥವಾ ಸ್ಮೃತಿಯಿಂದಲೂ ಅತೀತವಾಗಿದ್ದೀರೋ? ಯಾವುದೇ ಮಾತಿನಲ್ಲಿ ತಂದೆಯ ಸಮಾನ ತಮ್ಮ ಸ್ಮೃತಿಯಿರುತ್ತದೆಯೇ? (ಇಲ್ಲ) ಅಂತ್ಯದವರೆಗೆ ಸ್ಮೃತಿಯಲ್ಲಿ ಸಮಾನತೆ ಬರುವುದೇ? (ನಂಬರವಾರ್) ಮೊದಲ ಮಗುವಿಗೂ ಮತ್ತು ತಂದೆಯಲ್ಲಿ ಅಂತರವಿರುವಿದೇ? ಬಾಪ್ ದಾದಾರಲ್ಲಿ ಅಂತರವಿರುವುದೇ? (ಸಮಾನತೆ ಬರುವುದು). ಬೇಹದ್ದಿನ ತಂದೆಯ ಹಾಗೆಯೇ ದಾದಾ ಸಹ ಬೇಹದ್ದಿನ ತಂದೆಯಾಗಿದ್ದಾರೆ. ಬಾಪ್ ದಾದಾರ ಸಮೀಪ, ಸಮಾನತೆಯಿರಬೇಕು. ಎಷ್ಟೆಷ್ಟು ಸಮೀಪತೆಯೋ ಅಷ್ಟು ಸಮಾನತೆ, ಅಂತ್ಯದಲ್ಲಿ ಈಗ ಮಕ್ಕಳೂ ಸಹ ತಮ್ಮ ರಚನೆಯ ರಚಯಿತನಾಗಿ ಅನುಭವ ಮಾಡುವಿರಿ. ಹೇಗೆ ತಂದೆಗೆ ರಚನೆಯನ್ನು ನೋಡಿ ರಚಯಿತನ ಸ್ವರೂಪದ ಸ್ಮೃತಿ ಸ್ವತಃ ಇರುತ್ತದೆಯೋ ಅಂತಹ ಸ್ಥಿತಿ ನಂಬರವಾರ್ ಮಕ್ಕಳಿಗೂ ಬರಬೇಕು. ದೃಷ್ಟಿಯಿಂದ ಸೃಷ್ಟಿ ರಚನೆ ಮಾಡಲು ಬರುತ್ತದೆಯೇ? ತಮ್ಮ ರಚನೆ ಹೇಗಿದೆ? ವಿಕಾರದ್ದೋ ಅಥವಾ ದೃಷ್ಟಿಯದೋ? ದೃಷ್ಟಿಯಿಂದ ರಚನೆ ಮಾಡುವಿರಾ? ದೃಷ್ಟಿಯಿಂದ ಸೃಷ್ಟಿಯಾಗುತ್ತದೆ ಎಂಬ ಹೇಳಿಕೆಯಂತೆ ಸೃಷ್ಟಿ ಬದಲಾಗುವ ದೃಷ್ಟಿಯಲ್ಲಿ ದಿವ್ಯತೆಯನ್ನು ಅನುಭವ ಮಾಡುತ್ತೀರಾ? ಕೆಲವೊಮ್ಮೆ ದೃಷ್ಟಿ ಮೋಸ ಮಾಡುತ್ತದೆ ಮತ್ತು ದೃಷ್ಟಿ ಪತಿತರನ್ನು ಪಾವನ ಮಾಡುತ್ತದೆ. ದೃಷ್ಟಿ ಬದಲಾಗುವುದರಿಂದ ಸೃಷ್ಟಿ ಬದಲಾಗುತ್ತದೆ. ಹಾಗಾದರೆ ದೃಷ್ಟಿ ಎಲ್ಲಿಯವರೆಗೆ ಬದಲಾಗಿದೆ? ದೃಷ್ಟಿಯಲ್ಲಿ ಏನನ್ನು ಬದಲಿಸಿಕೊಳ್ಳಬೇಕು ಎಂಬುದು ಗೊತ್ತಿದೆಯೇ? ಆತ್ಮಿಕ ದೃಷ್ಟಿಯನ್ನು ತಯಾರು ಮಾಡಿಕೊಳ್ಳಬೇಕು. ಆತ್ಮಿಕ ದೃಷ್ಟಿ, ದಿವ್ಯ ದೃಷ್ಟಿ ಮತ್ತು ಅಲೌಕಿಕ ದೃಷ್ಟಿ ತಯಾರಾಗಿದೆಯಾ? ಎಲ್ಲಿ ನೋಡಿದರೂ, ಯಾರನ್ನೇ ನೋಡಿದರೂ ಆ ಆತ್ಮಿಕ ಸ್ವರೂಪವೇ ಕಂಡುಬರಬೇಕು. ಈ ರೀತಿ ದೃಷ್ಟಿ ಬದಲಾಗಿದೆಯೇ? ದೃಷ್ಟಿಯಲ್ಲಿ ಎಂದರೆ ಕಣ್ಣುಗಳಲ್ಲಿ ಕೊರತೆಯಿದ್ದರೆ ಒಂದೇ ಸಮಯದಲ್ಲಿ ಎರಡು ವಸ್ತುಗಳು ಕಂಡುಬರುತ್ತವೆ. ಅದರಂತೆಯೇ ದೃಷ್ಟಿ ಪೂರ್ಣ ಬದಲಾಗದಿದ್ದರೆ ಇಲ್ಲಿಯೂ ಎರಡು ವಸ್ತುಗಳು ಕಂಡು ಬರುತ್ತವೆ. ದೇಹಿ ಮತ್ತು ದೇಹ, ಒಮ್ಮೆ ಅದು ಒಮ್ಮೆ ಇದು. ಹಾಗಾಗುತ್ತದೆಯಲ್ಲವೇ? ಒಮ್ಮೆ ದೇಹವನ್ನು ನೋಡುತ್ತೀರಿ ಒಮ್ಮೆ ದೇಹಿಯನ್ನು ನೋಡುತ್ತೀರಿ. ಕಣ್ಣುಗಳು ಸರಿಯಿದ್ದಾಗ ಎರಡು ವಸ್ತುಗಳು ಹೇಗಿವೆಯೋ ಹಾಗೆಯೇ ಯಥಾರ್ಥ ರೂಪದಲ್ಲಿ ಕಂಡುಬರುತ್ತವೆ. ಅದೇ ರೀತಿ ಈ ದೃಷ್ಟಿಯೂ ಬದಲಾದಾಗ ಯಥಾರ್ಥವಾಗಿರುವುದು ಕಂಡುಬರುತ್ತದೆ. ಯಥಾರ್ಥ ರೂಪ ದೇಹವಲ್ಲ, ದೇಹಿಯಾಗಿದೆ. ಯಥಾರ್ಥ ರೂಪವಾಗಿರುವುದು ಕಂಡುಬರಬೇಕು. ಇದರಿಂದ ದೃಷ್ಟಿ ಸರಿಯಾಗಿದೆ ಎಂದು ತಿಳಿದುಕೊಳ್ಳಿ. ದೃಷ್ಟಿಯ ಮೇಲೆ ಬಹಳ ಗಮನವಿರಬೇಕು. ದೃಷ್ಟಿ ಬದಲಾದರೆ ಎಂದಿಗೂ ಮೋಸ ಹೋಗುವುದಿಲ್ಲ. ದೃಷ್ಟಿಯಿಂದಲೇ ಸಾಕ್ಷಾತ್ಕಾರ ಮಾಡುತ್ತೀರಿ ಮತ್ತು ಒಬ್ಬೊಬ್ಬರ ದೃಷ್ಟಿಯಲ್ಲಿ ತಮ್ಮ ಯಥಾರ್ಥ ರೂಪ, ಮನೆ ಹಾಗೂ ರಾಜಧಾನಿ ನೋಡುವಿರಿ. ದೃಷ್ಟಿ ಯಥಾರ್ಥವಾಗಿದ್ದರೆ ಎಷ್ಟೊಂದು ಶಕ್ತಿಯಿದೆ. ಹಾಗಾದರೆ ಯಾರಾದರೂ ಎದುರಿಗೆ ಬಂದರೆ ನನ್ನ ದೃಷ್ಟಿಯಿಂದ ಯಾವ ಸಾಕ್ಷಾತ್ಕಾರ ಮಾಡುವರು ಎಂದು ಸದಾ ತಮ್ಮನ್ನು ಪರಿಶೀಲನೆ ಮಾಡಿ. ತಮ್ಮ ವೃತ್ತಿಯಲ್ಲಿರುವುದನ್ನೇ ಅನ್ಯರು ತಮ್ಮ ದೃಷ್ಟಿಯಿಂದ ನೋಡುವರು. ವೃತ್ತಿ ದೇಹ ಅಭಿಮಾನದ್ದಾಗಿದ್ದರೆ, ಚಂಚಲವಾಗಿದ್ದರೆ ತಮ್ಮ ದೃಷ್ಟಿಯಿಂದ ಸಾಕ್ಷಾತ್ಕಾರವೂ ಹಾಗೆಯೇ ಆಗುವುದು. ಬೇರೆಯವರ

ದೃಷ್ಟಿ, ವೃತ್ತಿಯೂ ಚಂಚಲ ಆಗುವುದು. ಯಥಾರ್ಥ ಸಾಕ್ಷಾತ್ಕಾರ ಮಾಡಲಾರರು. ಇದನ್ನು ತಿಳಿದಿದ್ದೀರಲ್ಲವೇ? ಇವರ ತರಬೇತಿಯಿದೆಯಲ್ಲವೇ? ಈ ಗುಂಪಿಗೆ ಮುಖ್ಯ ವಿಷಯವಾಗಿದೆ ತಮ್ಮ ವೃತ್ತಿಯ ಸುಧಾರಣೆಯಿಂದ ತಮ್ಮ ದೃಷ್ಟಿಯನ್ನು ದಿವ್ಯ ಮಾಡುವುದು. ಎಲ್ಲಿಯವರೆಗೆ ಆಗಿದೆ? ಆಗಿಲ್ಲದಿದ್ದರೆ ಏಕೆ ಆಗಿಲ್ಲ? ಇದರ ಬಗೆಗೆ ಇವರಿಗೆ ಸ್ಪಷ್ಟ ತಿಳಿಸಿರಿ. ಸೃಷ್ಟಿ ಬದಲಾಗದಿರುವುದಕ್ಕೆ ಕಾರಣವಾಗಿದೆ ದೃಷ್ಟಿ ಬದಲಾಗದಿರುವುದು. ದೃಷ್ಟಿ ಬದಲಾಗದಿರುವುದಕ್ಕೆ ಕಾರಣ ವೃತ್ತಿ ಬದಲಾಗದಿರುವುದು, ದೃಷ್ಟಿ ಬದಲಾದರೆ ಸೃಷ್ಟಿಯೂ ಬದಲಾಗುವುದು. ಇತ್ತೀಚೆಗೆ ಎಲ್ಲಾ ಮಕ್ಕಳಿಗಾಗಿ ತಮ್ಮ ದೃಷ್ಟಿಯನ್ನು ಬದಲಿಸಿಕೊಳ್ಳಿ ಎಂದು ಬಾಪ್ ದಾದಾರ ವಿಶೇಷ ಸಂಕೇತವಿದೆ. ಸಾಕ್ಷಾತ್ಕಾರ ಮೂರ್ತಿಯಾಗಿ ಇವು ಕಣ್ಣುಗಳಲ್ಲ ಆದರೆ ಜಾದೂ ಪೆಟ್ಟಿಗೆ ಎಂದು ಅನುಭವ ಮಾಡಬೇಕು. ಹೇಗೆ ಜಾದೂ ಡಬ್ಬದಲ್ಲಿ ಭಿನ್ನ ಭಿನ್ನ ದೃಶ್ಯಗಳನ್ನು ನೋಡುತ್ತೀರೋ ಹಾಗೆಯೇ ತಮ್ಮ ಕಣ್ಣುಗಳು ದಿವ್ಯ ದೃಶ್ಯಗಳನ್ನು ನೋಡಲಿ. ಕಣ್ಣು ಸಾಕ್ಷಾತ್ಕಾರದ ಸಾಧನವಾಗಲಿ.

ಇದು ಯಾವ ಗುಂಪು ಎಂದು ಗೊತ್ತಿದೆಯೇ? ಇವರಲ್ಲಿ ಯಾವ ವಿಶೇಷತೆಗಳಿವೆ? ಇಡೀ ವಿಶ್ವದಲ್ಲಿ ವಿಶೇಷ ಆತ್ಮರಾದ್ದೀರಿ. ನಾವು ಸಾಧಾರಣವಾಗಿದ್ದೇವೆ ಎಂದು ತಿಳಿಯುತ್ತಿಲ್ಲ ತಾನೆ? ಈ ರೀತಿ ಎಂದೂ ತಿಳಿಯಬೇಡಿ. ಇಡೀ ವಿಶ್ವದಲ್ಲಿ ವಿಶೇಷ ಆತ್ಮರು ಯಾರಾಗಿದ್ದಾರೆ? ತಾವು ವಿಶೇಷ ಆತ್ಮರಾಗಿರದಿದ್ದರೆ ತಂದೆ ಏಕೆ ತಮ್ಮವರನ್ನಾಗಿಸಿಕೊಂಡರು? ತಮ್ಮನ್ನು ವಿಶೇಷ ಆತ್ಮವೆಂದು ತಿಳಿಯುವುದರಿಂದ ವಿಶೇಷತೆ ಬರುವುದು. ಸಾಧಾರಣವೆಂದು ತಿಳಿದರೆ ಸಾಧಾರಣ ಕರ್ತವ್ಯವನ್ನು ಮಾಡುವಿರಿ. ಒಂದೊಂದು ಆತ್ಮ ತಮ್ಮನ್ನು ವಿಶೇಷವೆಂದು ತಿಳಿದು ಬೇರೆಯವರಲ್ಲಿಯೂ ವಿಶೇಷತೆಯನ್ನು ತರಬೇಕು, ನೀವು ವಿಶೇಷ ಆತ್ಮರಾಗಿರುವಿರಿ, ಇದು ಈಶ್ವರೀಯ ನಶೆಯಾಗಿದೆ. ದೇಹಾಭಿಮಾನದ ನಶೆಯಲ್ಲ. ಈಶ್ವರೀಯ ನಶೆ ಸದಾ ಕಣ್ಣುಗಳಿಂದ ಕಂಡುಬರಬೇಕು. ಹಾಗಾದರೆ ಈ ಗುಂಪಿನ ವಿಶೇಷತೆ ಏನಾಗಿದೆ? ತಾವು ತಮ್ಮ ಗುಂಪಿನ ವಿಶೇಷತೆ ತಿಳಿದಿದ್ದೀರಾ? (ಖಾಲಿ ಹಾಳೆಯಾಗಿದೆ, ಅನೇಕರು ತಮ್ಮ ವಿಭಿನ್ನ ಮಾತುಗಳನ್ನು ಹೇಳಿದರು). ಈ ಗುಂಪಿನ ಟೈಟಲ್ ಬಹಳ ದೊಡ್ಡದಿದೆ. ತರಬೇತಿಯ ನಂತರ ಇದೇ ಗುಣಗಳು ಕಾಯಂ ಇರಲೂ ಸಹ ತರಬೇತಿ ಬೇಕು. ಈಗ ವಿಶೇಷತೆಗಳನ್ನು ಚೆನ್ನಾಗಿ ಕೇಳುತ್ತಿದ್ದೀರಿ. ಖಾಲಿ ಹಾಳೆಯ ಮೇಲೆ ಬರೆದದ್ದು ಸ್ಪಷ್ಟವಾಗಿರುತ್ತದೆ. ಎಷ್ಟು ಸ್ಪಷ್ಟವೋ ಅಷ್ಟು ಶ್ರೇಷ್ಠ. ಸ್ಪಷ್ಟತೆಯಲ್ಲಿ ಕೊರತೆಯಿದ್ದರೆ ಶ್ರೇಷ್ಠತೆಯಲ್ಲಿಯೂ ಕೊರತೆಯಿರುವುದು. ಮತ್ತೇನನ್ನೂ ಮಿಶ್ರಣ ಮಾಡಬೇಡಿ. ಕೆಲವರು ಬಹಳ ಮಿಶ್ರಣ ಮಾಡುತ್ತಾರೆ. ಇದರಿಂದ ಏನಾಗುತ್ತದೆ? ಯಥಾರ್ಥ ರೂಪವೂ ಅಯಥಾರ್ಥವಾಗುತ್ತದೆ. ಅದೇ ಜ್ಞಾನದ ಮಾತುಗಳು ಮಾಯೆಯ ಮಾತುಗಳ ರೂಪವಾಗುತ್ತವೆ. ಆದ್ದರಿಂದ ಈ ಗುಂಪಿನ ವಿಶೇಷತೆ "ಸದಾ ಸ್ಪಷ್ಟ ಮತ್ತು ಶ್ರೇಷ್ಠ" ಎಂಬುದು ಚಿತ್ರದಲ್ಲಿ ಕಂಡುಬರಬೇಕು. ಸದಾ ತಮ್ಮ ಯಥಾರ್ಥ ರೂಪದಲ್ಲಿರಿ. ತಂದೆಯಂತೆ ಇರುವುದನ್ನು ತಿಳಿದು ಅದನ್ನು ಧಾರಣೆ ಮಾಡಬೇಕು ಮತ್ತು ಮುಂದುವರೆಯಬೇಕು. ಇದಾಗಿದೆ ಸ್ಪಷ್ಟತೆ. ಈ ಗುಂಪಿಗೆ ಬಾಪ್ ದಾದಾ ಯಾವ ಟೈಟಲ್ ಕೊಡುತ್ತಾರೆ? ಚಿಕ್ಕವರು (ಸುಭಾನಲ್ಲಾ) ತಂದೆಯ ಸಮಾನ ಮಹಿಮೆಗೆ ಯೋಗ್ಯರು ಎಂದು ಹೇಳಿಕೆಯಿದೆ ಆದರೆ ಬಾಪ್ ದಾದಾ ಚಿಕ್ಕವರು ಅಲ್ಲಾನ ಸಮಾನವೆಂದು ಹೇಳುತ್ತಾರೆ. ಎಲ್ಲಾ ಮಾತುಗಳಲ್ಲಿ ಹೆಜ್ಜೆ -ಹೆಜ್ಜೆಗಳಲ್ಲಿ ಸಮಾನತೆ ಇಟ್ಟುಕೊಳ್ಳಿ. ಆದರೆ ಸಮಾನತೆ ಹೇಗೆ ಬರುವುದು? ಸಮಾನತೆಗೆ ಎರಡು ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಿ, ಸಾಕಾರ ರೂಪದಲ್ಲಿ ಯಾವ ವಿಶೇಷತೆಗಳನ್ನು ನೋಡಿದಿರಿ? ಒಂದು ಸದಾ ತಮ್ಮನ್ನು ಆಧಾರಮೂರ್ತಿ ಎಂದು ತಿಳಿಯಿರಿ. ಇಡೀ ವಿಶ್ವದ ಆಧಾರ ಮೂರ್ತಿ, ಇದರಿಂದ ಯಾವ ಕರ್ಮವನ್ನಾದರೂ ಜವಾಬ್ದಾರಿಯಿಂದ ಮಾಡುವಿರಿ. ಹುಡುಗಾಟಿಕೆ ಇರುವುದಿಲ್ಲ. ಹೇಗೆ ಬಾಪ್ ದಾದಾ ಆಧಾರಮೂರ್ತಿ ಆಗಿರುವರೋ ಹಾಗೆಯೇ ಪ್ರತಿಯೊಂದೂ ಮಗುವೂ ವಿಶ್ವದ ಆಧಾರಮೂರ್ತಿಯಾಗಿದೆ. ತಾವು ಮಾಡುವ ಕರ್ಮವನ್ನು ಎಲ್ಲರೂ ಮಾಡುವರು. ಸಂಗಮದಲ್ಲಿ ಯಾವ ವಿಧಿ ನಡೆಯುತ್ತದೆಯೋ, ಅದೇ ಭಕ್ತಿಮಾರ್ಗದಲ್ಲಿ ಬದಲಿಯಾಗಿ ನಡೆಯುತ್ತದೆ. ಇಡೀ ವಿಶ್ವಕ್ಕೆ ತಾವು ಆಧಾರಮೂರ್ತಿ ಆಗಿದ್ದೀರಿ. ಪ್ರತಿಯೊಬ್ಬರೂ ತಮ್ಮನ್ನು ಆಧಾರಮೂರ್ತಿ ಎಂದು ತಿಳಿದುಕೊಳ್ಳಬೇಕು ಮತ್ತು ಉದ್ಧಾರಮೂರ್ತಿಯಾಗಬೇಕು. ಎಷ್ಟು ತಾವು ತಮ್ಮ ಉದ್ಧಾರ ಮಾಡುವಿರೋ ಅಷ್ಟು ಬೇರೆಯವರ ಉದ್ಧಾರ ಮಾಡುವಿರಿ. ತಮ್ಮ ಉದ್ಧಾರ ಮಾಡಿಕೊಳ್ಳದಿದ್ದರೆ ಬೇರೆಯವರನ್ನು ಹೇಗೆ ಉದ್ಧಾರ ಮಾಡುವಿರಿ? ಉದ್ಧಾರಮೂರ್ತಿ

ಆದಾಗಲೇ ಬೇರೆಯವರ ಉದ್ಧಾರ ಮಾಡುವಿರಿ, ಚಿಕ್ಕವರಿದ್ದರೂ ತಂದೆಯ ಸಮಾನ ಕರ್ತವ್ಯ ಮಾಡಬೇಕು. ಇದನ್ನು ನೆನಪಿಟ್ಟುಕೊಳ್ಳುವುದರಿಂದ ಸಮಾನತೆ ಬರುವುದು. "ಚಿಕ್ಕವರು ತಂದೆಯ ಸಮಾನ " ಎಂಬ ಈ ಗುಂಪಿಗೆ ಕೊಟ್ಟ ಟೈಟಲ್ ಆಗ ಪ್ರತ್ಯಕ್ಷ ಕಂಡುಬರುವುದು. ಇದನ್ನು ಮರೆಯಬಾರದು. ಒಳ್ಳೆಯದು. ಈಗ ಏನು ಮಾಡಬೇಕು? (ತಿಲಕ ಹಚ್ಚಬೇಕು) ಈ ತಿಲಕ ಸಾಧಾರಣವಾದದ್ದಲ್ಲ. ತಿಲಕವನ್ನು ಏಕೆ ಹಚ್ಚುತ್ತಾರೆ ಎಂಬುದು ಗೊತ್ತಿದೆಯೇ? ತಿಲಕ ಸೌಭಾಗ್ಯದ ಚಿಹ್ನೆಯಾಗಿದೆ. ಯಾವ ಮಾತುಗಳನ್ನು ಕೇಳಿದಿರೋ ಅವುಗಳಲ್ಲಿ ಸ್ಥಿರವಾಗಿರುವ ಲಕ್ಷಣವಾಗಿದೆ. ತಿಲಕವು ಮಸ್ತಕದಲ್ಲಿ ಸ್ಥಿರವಾಗಿರುತ್ತದೆ. ಆದ್ದರಿಂದ ಬುದ್ಧಿಯಲ್ಲಿ ಈ ಮಾತುಗಳು ಸ್ಥಿರವಾಗಿರಲು ಈ ತಿಲಕವನ್ನು ಹಚ್ಚಲಾಗುತ್ತದೆ. ಏತಕ್ಕಾಗಿದೆ? (ಅನೇಕರು ತಮ್ಮ ವಿಚಾರವನ್ನು ಹೇಳಿದರು) ಬಾಪ್ ದಾದಾ ಹೇಳುವುದು ಭಿನ್ನವಾಗಿರುತ್ತದೆ. ಈ ತಿಲಕ (ಬಿ-ಇಂಜೆಕ್ಷನ್) ಸದಾ ಮಾಯೆಯ ರೋಗಗಳಿಂದ ಮುಕ್ತರಾಗಿರಲು ಇದೆ. ಸದಾ ಆರೋಗ್ಯವಂತರಾಗಿ ಇರುವದಕ್ಕಾಗಿದೆ. ತಾವೂ ಹೇಳಿದ್ದೂ ಸರಿ, ಆದರೆ ಇದೂ ಸಹ ಇದೆ, ಎರಡೂ ತಿಲಕ ಹಾಕಿಸಿಕೊಳ್ಳಬೇಕು. ಒಂದು ಶಕ್ತಿಶಾಲಿಯಾಗಲು ಮತ್ತೊಂದು ಸದಾ ಸುಮಂಗಲಿ ಮತ್ತು ಭಾಗ್ಯವಂತರಾಗಿರಲು. ಎರಡನ್ನೂ ಬಾಪ್ ದಾದಾ ಹಚ್ಚುತ್ತಾರೆ. ಚಿಹ್ನೆ ಒಂದು, ಆದರೆ ರಹಸ್ಯಗಳೆರಡು, ಚಿಹ್ನೆ ಸ್ಥೂಲವಾಗಿರುತ್ತದೆ, ಆದರೆ ರಹಸ್ಯ ಎರಡಿವೆ. ಆದ್ದರಿಂದ ತಿಲಕ ಹಚ್ಚಿಕೊಳ್ಳುವುದು ಎಂದರೆ ಸದಾಕಾಲಕ್ಕೆ ಪ್ರತಿಜ್ಞೆ ಮಾಡುವುದು. **ಈ ತಿಲಕ ಒಂದು ಪ್ರತಿಜ್ಞೆಯ ಲಕ್ಷಣವಾಗಿದೆ. ಸದಾ ಪ್ರತಿಯೊಂದು ಮಾತಿನಲ್ಲಿ ಗೌರವಯುತವಾಗಿ ತೇರ್ಗಡೆ ಹೊಂದುವೆವು ಎಂಬ ಪ್ರತಿಜ್ಞೆಯ ತಿಲಕ ಇದಾಗಿದೆ**. ಇಷ್ಟು ಸಾಹಸವಿದೆಯೇ? ಕೇವಲ ತೇರ್ಗಡೆಯಾಗುವುದಲ್ಲ, ಆದರೆ ಗೌರವಯುತ ತೇರ್ಗಡೆ, ಗೌರವಯುತ ತೇರ್ಗಡೆ ಹಾಗೂ ತೇರ್ಗಡೆಯಲ್ಲಿ ಯಾವ ಅಂತರವಿದೆ? **ಗೌರವಯುತ ತೇರ್ಗಡೆ (ಪಾಸ್ ವಿತ್ ಆನರ್) ಎಂದರೆ ಮನದ ಸಂಕಲ್ಪದಿಂದಲೂ ಶಿಕ್ಷೆಯಿಲ್ಲ. ಧರ್ಮರಾಜನ ಶಿಕ್ಷೆಯ ಮಾತು ಆಮೇಲೆ, ಆದರೆ ತಮ್ಮ ಸಂಕಲ್ಪಗಳ ಗೊಂದಲ ಅಥವಾ ಶಿಕ್ಷೆಗಳಿಂದ ದೂರ. ತಮ್ಮ ತಪ್ಪಿನಿಂದ ತಮಗೆ ಶಿಕ್ಷೆ ಕೊಟ್ಟುಕೊಳ್ಳುತ್ತಾರೆ. ದ್ವಂದ್ವದಲ್ಲಿ ಬರುವುದು, ಮೊರೆಯಿಡುವುದು, ಗೊಂದಲದಲ್ಲಿ ಬರುವುದು ಇದೆಲ್ಲದರಿಂದ ದೂರ. ಇದನ್ನೇ ಗೌರವಯುತ ತೇರ್ಗಡೆ ಎನ್ನುತ್ತಾರೆ.** ಇಂತಹ ಪ್ರತಿಜ್ಞೆ ಮಾಡಲು ತಯಾರಾಗಿರುವಿರಾ? ಮಾತು, ಕರ್ಮ, ಸಂಬಂಧ,ಸಂಪರ್ಕದ ಮಾತಂತೂ ಬಿಡಿ. ಸಂಕಲ್ಪದಲ್ಲಿಯೂ ಸಿಕ್ಕಿ ಹಾಕಿಕೊಳ್ಳುವುದಲ್ಲ. ಅದು ಸ್ಥೂಲ ಮಾತಾಯಿತು. ಈ ರೀತಿಯ ಪ್ರತಿಜ್ಞೆ ಮಾಡುವ ಗುಂಪಾಗಿದೆಯಾ? ಸಾಹಸಿಗಳಾಗಿದ್ದೀರಿ.

ಸಾಹಸ ಸದಾಕಾಲ ಇದ್ದಾಗ ಸರ್ವ ಸಹಯೋಗಿ ಎಲೆಗಳಾಗುವಿರಿ. ಸಹಯೋಗಿಯಾಗಿದ್ದರೆ ಸ್ನೇಹ ಸಿಗುವುದು. ವೃಕ್ಷದಲ್ಲಿ ಬರುವ ಕೋಮಲ ಮತ್ತು ಚಿಕ್ಕ ಎಲೆಗಳು ಎಲ್ಲರಿಗೂ ಪ್ರಿಯವಾಗಿರುತ್ತವೆ. ಪಕ್ಷಿಗಳು ಕೋಮಲ ಎಲೆಗಳನ್ನೇ ತಿನ್ನುತ್ತವೆ. ಕೇವಲ ಯಾರಿಗೆ ಪ್ರಿಯರಾಗಿರಬೇಕು? ಬಾಪ್ ದಾದಾರಿಗೆ ಹೊರತು ಪಕ್ಷಿಗಳಿಗಲ್ಲ. ಆದ್ದರಿಂದ ಇವೂ ಕೋಮಲ ಎಲೆಗಳಾಗಿವೆ. ಕೋಮಲ ಎಲೆಗಳಿಗೆ ಯಾವ ಅದ್ಭುತವನ್ನು ಮಾಡಬೇಕಾಗಿದೆ? ತಮ್ಮ ಈಶ್ವರೀಯ ಚರಿತ್ರೆಗೆ ಸರ್ವರನ್ನೂ ಆಕರ್ಷಿತವಾಗಬೇಕು. ತಮ್ಮ ಕಡೆಗಲ್ಲ, ಚರಿತ್ರೆಯ ಕಡೆಗೆ. ಈ ಗುಂಪಿನ ಮೇಲೆ ಪೂರ್ಣ ಗಮನವಿದೆ. ಈ ಗುಂಪಿಗೆ ತಮ್ಮ ಮೇಲೆಯೂ ಅಷ್ಟೇ ಗಮನವಿರಬೇಕು.

ಅವ್ಯಕ್ತ ಮುರಳಿ 06-08-1970.

***ದೃಷ್ಟಿಯಿಂದ ಸೃಷ್ಟಿಯ ರಚನೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ದೃಷ್ಟಿ ಮತ್ತು ಸ್ಮೃತಿಯಲ್ಲಿ ತಂದೆಯ ಸಮಾನವಾಗಿ ತಯಾರಾಗಿದ್ದೇನೆ.

2. ನಾನು ನನ್ನ ರಚನೆಗೆ ರಚಯಿತನು ಮತ್ತು 'ದೃಷ್ಟಿಯಿಂದ ಸೃಷ್ಟಿ' ಎಂಬ ಮಹಿಮೆಯನ್ನು ಅನುಭವ ಮಾಡಿಕೊಂಡಿದ್ದೇನೆ.

3. ನಾನು ಯಾರನ್ನು ನೋಡಿದಾಗಲೂ ಆತ್ಮಿಕ ಸ್ವರೂಪವನ್ನೇ ನೋಡುತ್ತಿದ್ದೇನೆ.

4. ನನ್ನ ಯತಾರ್ಥ ದೃಷ್ಟಿಯಿಂದ ಸರ್ವಾತ್ಮರೂ ಅವರ ಯತಾರ್ಥ ರೂಪ, ಯತಾರ್ಥ ಮನೆ ಮತ್ತು ಯತಾರ್ಥ ರಾಜಧಾನಿಯನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ.

5. ನಾನು ನನ್ನ ವೃತ್ತಿಯ ಶ್ರೇಷ್ಠತೆಯಿಂದ ದೃಷ್ಟಿಯನ್ನು ದಿವ್ಯವಾಗಿಸಿಕೊಂಡಿದ್ದೇನೆ.

6. ನಾನು ಇಡೀ ವಿಶ್ವದಲ್ಲಿ ವಿಶೇಷ ಆತ್ಮ.

7. ವಿಶೇಷ ಆತ್ಮನಾದ ನನ್ನ ನಯನಗಳಿಂದ ಸದಾ ಈಶ್ವರೀಯ ನಶೆ ಕಾಣಿಸುತ್ತಿದೆ.

8. ನಾನು ಸದಾ ಸ್ಪಷ್ಟವಾಗಿ ಮತ್ತು ಶ್ರೇಷ್ಠವಾಗಿ ಇದ್ದೇನೆ.

9. 'ನಾನು ವಿಶ್ವಕ್ಕೆ ಆಧಾರ ಮೂರ್ತಿ ಮತ್ತು ಉದ್ಧಾರ ಮೂರ್ತಿ' ಎಂಬ ನೆನಪಿನಿಂದ ಸಾಕಾರ ಬಾಬಾರವರ ಸಮಾನವಾಗಿ ತಯಾರಾಗಿದ್ದೇನೆ.

10. 'ನಾನು ಯಾವ ಕರ್ಮ ಮಾಡುತ್ತೇನೆಯೋ ಎಲ್ಲರೂ ಅದೇ ಕರ್ಮವನ್ನು ಮಾಡುತ್ತಾರೆ. (ಆಧಾರ ಮೂರ್ತಿ)'.

11. ನಾನು ನನ್ನ ಉದ್ಧಾರದ ಮೂಲಕ ಎಲ್ಲರ ಉದ್ಧಾರವನ್ನು ಮಾಡಿರುವ ಉದ್ಧಾರ ಮೂರ್ತಿ.

12. ನಾನು ಸದಾ ಶಕ್ತಿಶಾಲಿ, ಸೌಭಾಗ್ಯ ಮತ್ತು ಭಾಗ್ಯದ ತಿಲಕವನ್ನು ಬಾಪ್ ದಾದಾರವರಿಂದ ಹಚ್ಚಿಸಿಕೊಂಡಿದ್ದೇನೆ.

13. ನಾನು ಮನಸ್ಸಿನಿಂದಲೂ ಶಿಕ್ಷೆಯನ್ನು ಹೊಂದದ ಪಾಸ್ ವಿತ್ ಆನರ್ ಸ್ವರೂಪ.

14. ನನ್ನ ಈಶ್ವರೀಯ ಚರಿತ್ರೆಗೆ ಸರ್ವಾತ್ಮರು ಆಕರ್ಷಣೆಗೊಳಗಾಗಿದ್ದಾರೆ.